# ಮನೆಗೂ ಜೀವವಿದೆ

ನಾವು ಬಾಳಿಬದುಕುವ ಪರಿಸರ ನಮಗೆ ಪ್ರಿಯವಾಗುತ್ತದೆ. ಅದರೊಡನೆ ಆಡಿ ನಲಿದು ನಾವು ಬೆಳೆದಿರುತ್ತೇವೆ. ಅದು ನಮಗೆ ಸ್ನೇಹಿತನಾಗಿ, ತಂದೆತಾಯಿಯಾಗಿ ಹಾಗೂ ಗುರುವಾಗಿ ಕೈಹಿಡಿದು ನಡೆಸಿರುತ್ತದೆ. ಆದುದರಿಂದ ನನ್ನ ಮನೆ, ನನ್ನ ನೆಲ ಮತ್ತು ನನ್ನ ಜನವೆಂದರೆ ನಮಗೆ ಆತ್ಮೀಯವಾದ ಭಾವ ತರಂಗಗಳೇಳುತ್ತವೆ. ಅದು ವ್ಯಾವಹಾರಿಕ ಸಂಬಂಧಗಳಾಚೆಗೂ ಅಂತರಂಗ ಭಾವರಂಗ ವ್ಯಾಪಾರವಾಗಿರುತ್ತದೆ. ಅಲ್ಲಿ ಕೊಡುಕೊಳ್ಳುವ ಪರಿಭಾಷೆಯ ಲೆಕ್ಕಾಚಾರದ ಪ್ರಶ್ನೆಯೇ ಉದ್ಭವವಾಗುವುದಿಲ್ಲ. ಆ ಪರಿಸರ ಎಂಥ ಗಾಢವಾದ ಚುಂಬಕ ಶಕ್ತಿಯನ್ನು ಹೊಂದಿರುತ್ತದೆಯೆಂದರೆ–ಅದರಿಂದ ದೂರ ಸಿಡಿದಷ್ಟು ಅದರ ಸೆಳೆತ ಅಧಿಕವಾಗುತ್ತದೆ. ಅದರ ನೆನಪು ಆಹ್ಲಾದವನ್ನೂ ಪುಳಕವನ್ನೂ ಉಂಟುಮಾಡುತ್ತದೆ. ಈ ಕಾರಣದಿಂದಲೇ ದೂರದ ನೆಲದಲ್ಲಿ ಬದುಕುವ ಪಂಪನಿಗೆ ಬನವಾಸಿಯ ನೆನಪು ಕಾಡುವುದು; ಮಲೆನಾಡಿನಿಂದ ದೂರವಿದ್ದ ಕುವೆಂಪು ಅವರಿಗೆ ಸದಾ ಭಾವಲೋಕದಲ್ಲಾದರೂ ತಮ್ಮ ಮಲೆನಾಡಿನ ಗೂಡಿಗೆ ಹೋಗುವ ತವಕವುಂಟಾಗುತ್ತದೆ.

ನಾವು ಹುಟ್ಟಿದ, ಬೆಳೆದು ನಲಿದ ಮನೆ ಕೇವಲ ಕಲ್ಲು ಗಾರೆ ಇಟ್ಟಿಗೆಗಳಿಂದ ಕಟ್ಟಿದ ಅಜೀವ ಸಂಗತಿಯಲ್ಲ. ಅದಕ್ಕೊಂದು ಜೀವವಿರುತ್ತದೆ; ಅಲ್ಲಿ ಆಡಿ ಬೆಳೆದ ಜೀವಗಳ ಅಂತರಾಳದಲ್ಲಿ ಸದಾ ತುಡಿತಮಿಡಿತಗಳ ಮುಳ್ಳಾಡಿಸುವ ಉಸಿರಾಡುವ ಜೀವವೇ ಆಗಿರುತ್ತದೆ. ಗ್ರಾಮೀಣ ಪರಿಸರದ ಮನೆಗಳನ್ನು ನೋಡಿ ಅವಕ್ಕಿರುವ ಜೀವಲಕ್ಷಣ ಪ್ರಕೃತಿಯ ಪ್ರತಿರೂಪವಾಗಿರುತ್ತದೆ. ಅವು ಹೇಳಿಕೇಳಿ ಮರಗಿಡಗಳ ನಡುವೆ ಇರುತ್ತವೆ. ಮನೆಯ ಮುಂದೆ ಮರಗಳು; ಮನೆಯ ಹಿಂದೆ ಕಡ್ಡಾಯವಾಗಿ ಹಿತ್ತಲು, ಮನೆಯ ಒಳಗಡೆ ಮನುಷ್ಯರ ಜೊತೆ ಪ್ರಾಣಿಗಳೂ ಇರುತ್ತವೆ! ಅವುಗಳ ಕೊಟ್ಟಿಗೆಗಳು! ಮನೆಯೆಂದರೆ ಕೇವಲ ಮನುಷ್ಯರ ವಾಸಸ್ಥಳ ಮಾತ್ರವೆಂಬ ಪರಿಕಲ್ಪನೆಯೇ ಅಲ್ಲಿ ಮೂಡಲು ಸಾಧ್ಯವಿಲ್ಲ. ದನಕರು, ಆಡುಕುರಿ, ಕೋಳಿಕುಕ್ಕ–ಹೀಗೆ ಜೀವಸಂಕುಲವೇ ಅಲ್ಲಿ ಮನುಷ್ಯರ ಜೊತೆ ಬಾಳ್ವೆ ಮಾಡುತ್ತಿರುತ್ತವೆ. ಅವು ತಮ್ಮ ಸಹಜೀವಿಗಳನ್ನು ಪ್ರೀತಿಸುವ ಬಗೆಯನ್ನು ಅನುಭವಿಸಿದವರೇ ಬಲ್ಲರು. ತಮ್ಮನ್ನು ಸಾಕಿದ ಮನುಷ್ಯರನ್ನು ಮಾತ್ರವಲ್ಲದೆ ತಮ್ಮೊಡನೆ ಜೀವಿಸುವ ಇತರೆ ಜೀವಿಗಳನ್ನು ಸಹ ಪ್ರೀತಿಯಿಂದ ಜೋಪಾನ ಮಾಡಬಯಸುತ್ತವೆ. ಮನುಷ್ಯರೊಡನೆ ಬಾಳ್ವೆಮಾಡಿದ ಅವಕ್ಕೆ ಮನುಷ್ಯನ ಕುಟುಂಬದ ಮೌಲ್ಯಾಧಾರಿತ ಸಂಬಂಧಗಳು ಮೈಗೂಡಿರುತ್ತವೆಯೇನೋ! ಆದುದರಿಂದ ಮನೆಯೆಂದರೆ ಈ ಎಲ್ಲ ಜೀವಗಳು ಇರಲೇಬೇಕೆಂದು ನಮ್ಮ ಗ್ರಾಮೀಣ ಸಮಾಜ ನಂಬಿಕೊಂಡು ಬಂದಿತ್ತು.

ಗ್ರಾಮಬದುಕಿನ ರಾತ್ರಿಗಳನ್ನು ಅನುಭವಿಸಬೇಕು. ಆ ಮನೆಯಲ್ಲಿ ಒಂದು ಪರಿಚಿತ ಜೀವ ತಂತು ಎದೆಯಿಂದ ಎದೆಗೆ ಹರಿಯುತ್ತಿರುತ್ತದೆ. ನಿಡಿದಾಗಿ ಉಸಿರುಬಿಡುವ ದನ ಎಮ್ಮೆ ಎತ್ತುಗಳು; ಆಗಿಂದಾಗ್ಗೆ ಸೊರ್ರನೆ ಬೀಳುವ ಗಂಜಲ; ತೊಪ್ಪನೆ ಬೀಳುವ ಸಗಣಿ; ಯಾವುದೋ ಮಾನವರಿಗೆ ಅಗೋಚರವಾದ ಸದ್ದು ಕೇಳಿ ಪ್ರತಿಕ್ರಿಯಿಸುವ ಕೋಳಿಗಳು, ಮೇಕೆ ಕುರಿಗಳು; ಯಾವುದೋ ಸುಳಿಹಿಡಿದು ಬೊಗಳುವ ನಾಯಿಗಳು; ಹೆಂಚುಗಳ ಸಂದುಗಳಲ್ಲಿ ನುಸುಳಿ ನೆಗೆದಾಡುವ ಬೆಕ್ಕುಗಳು; ಹಿತ್ತಲ ಮರಗಳ ಮೇಲೆ ಕುಳಿತು ಗಕ್ಕನೆ ಅಮೂರ್ತ ನಿಗೂಢತೆಯ ಮರ್ಮವನ್ನು ಭೇದಿಸುವಂತೆ ಕೂಗುವ ಗೂಬೆ–ಇವೆಲ್ಲವೂ ಆ ಮನೆಯ ಉಸಿರಾಟದ ಚಿಹ್ನೆಗಳು. ರಾತ್ರಿ ತಾಯಮಡಿಲಲ್ಲಿ ನಿದ್ರಿಸುವ ಮಗುವಿನಿಂದ ಹಿಡಿದು ಮುದುಕನವರೆಗೆ ಆ ಮನೆಯ ಉಸಿರಾಟವನ್ನು ಬಲ್ಲರು. ಆ ದನಿಗಳು ಅವರ ಜೋಗುಳದ ರಾಗಗಳಾಗಿ ಅವರನ್ನು ನೆಮ್ಮದಿಯ ನಿದ್ರೆಗೆ ಕರೆದೊಯ್ಯುತ್ತವೆ.

ನಗರಗಳ ಬದುಕು ಇದಕ್ಕಿಂತ ಭಿನ್ನವೇನಲ್ಲ. ನಗರಕ್ಕೆ ಆದ ವಿಶೇಷ ಶಾಬ್ದಿಕ ಸ್ವರೂಪದ ಚಿಹ್ನೆಗಳಿವೆ. ರಾತ್ರಿಯುದ್ದಕ್ಕೂ ನಿಲ್ಲದ ಲಾರಿ ಬಸ್ಸುಗಳ ಸದ್ದುಗಳು; ಎಲ್ಲೋ ದೂರದಲ್ಲಿ ಸರಿರಾತ್ರಿಯಲ್ಲೂ ಕೇಳಿ ಬರುವ ರೇಡಿಯೋ ಧ್ವನಿ; ಆಗಿಂದಾಗ್ಗೆ ಮನೆಯ ಕಿಟಕಿಗಳು ಅಲ್ಲಾಡುವಂತೆ ರಸ್ತೆಯಲ್ಲಿ ಸಾಗುವ ನಗರ ಸಾರಿಗೆ ವಾಹನದ ವೇಗ ಶಕ್ತಿ; ಕವಿ ಶಿವರುದ್ರಪ್ಪನವರಿಗೆ ಕೇಳಿಸುವ ಎಲ್ಲೋ ಅಳುವ ಮಗುವಿನ ರಾಗಾಲಾಪನೆ; ಕುಡಿದು ರಸ್ತೆಯಲ್ಲಿ ಕಿರುಚಾಡುತ್ತಾ ಸಾಗುವ ಐಟಿ ಬಿಟಿ ಹುಡುಗರ ಪಲ್ಸರ್ ಆರ್ಭಟ; ಇತ್ತ ಕೆಟ್ಟ ನಲ್ಲಿಗಳಿಂದ ತೊಟ ತೊಟನೆ ತೊಟ್ಟಿಕ್ಕುವ ನೀರಿನ ಸದ್ದು; ಇದ್ದಕ್ಕಿದಂತೆ ಅಪರಿಚತರನ್ನು ನೋಡಿ ಬೊಗಳುವ ನಾಯಿಗಳು–ಇವೆಲ್ಲವೂ ನಗರದ ಬದುಕಿಗೆ ಅಂಟಿಕೊಂಡೇ ಸುಪರಿಚಿತವಾದ ಜೀವಸಂಬಂಧಿ ಚಿಹ್ನೆಗಳು. ಈ ಚಿಹ್ನೆಗಳನ್ನು ಹೊರತಾದ ನಗರದ ಬದುಕನ್ನು ಕಲ್ಪಿಸಿಕೊಳ್ಳಲಾಗುವುದೇ ಇಲ್ಲ. ಜಗತ್ತಿನ ದೊಡ್ಡ ದೊಡ್ಡ ಶಹರಗಳು ನಿದ್ರೆಯನ್ನೇ ಮಾಡುವುದಿಲ್ಲ. ಸದಾ ದುಡಿಮೆ, ಸದಾ ಜಾಗೃತದ ನಡೆ, ಇಂಥ ಸದ್ದುಗದ್ದಲದ ನಡುವೆ ಬದುಕು ಮಾಡುವುದು ರೂಢಿಯಾಗಿಬಿಡುತ್ತದೆ. ಈ ಸದ್ದುಗದ್ದಲವಿಲ್ಲದಿದ್ದರೆ ತಾಳತಪ್ಪಿದ ಹಾಡಿನಂತೆ ಅದರಲ್ಲಿನ ಬದುಕು ಆತಂಕ ಪಡುತ್ತದೆ.

■ ಶಿಕಾಕು

## ಮಾತೇ ಮುತ್ತು

★ ಅನಗತ್ಯವಾದುದನ್ನು ಸಂಗ್ರಹಿಸಿಡುವ ಮನೋವೃತ್ತಿ ಅಪಾಯಕರವಾದುದು. ಇದರಿಂದ ಅತಿಯಾದ ಲೋಭ, ದುರಾಸೆಗಳು ಹೆಚ್ಚಿ ವ್ಯಕ್ತಿಯ ಪತನಕ್ಕೆ ಕಾರಣವಾಗುತ್ತವೆ.

–ವೀರೇಂದ್ರ ಹೆಗ್ಗಡೆ

★ ಎನ್ನವಗುಣವೆಂಬ ಕಳೆಯ ಕಿತ್ತು ಸಲಹಯ್ಯ ಲಿಂಗ ತಂದೆ, ಸುಳಿದೊಗೆದು ಬೆಳೆವೆನು ನೋಡಾ ಕೂಡಲ ಸಂಗಮದೇವಾ.

–ಬಸವಣ್ಣ

★ ಅಗಸ ನೀರೊಳಗಿರ್ದು ಬಾಯಾರಿ ಸತ್ತಂತೆ, ತಮ್ಮೊಳಗಿದ್ದ ಮಹಾಘನವನರಿಯರು ನೋಡಾ ಚೆನ್ನಮಲ್ಲಿಕಾರ್ಜುನ.

–ಅಕ್ಕ ಮಹಾದೇವಿ

★ ದುಷ್ಟನನ್ನು ಮೊದಲು ವಂದಿಸುತ್ತೇನೆ, ಆಮೇಲೆ ಸತ್ಪುರುಷನನ್ನು; ಮುಖ ತೊಳೆಯುವುದಕ್ಕೆ ಮೊದಲು ಗುದವನ್ನು ತೊಳೆದಂತೆ.

–ಸಮಯೋಚಿತ ಪದ್ಯಮಾಲಿಕಾ

★ ಅವನು ಏನು ಕೆಲಸ ಮಾಡಲಾರ ಎನ್ನುವುದನ್ನು ನಾನು ಯೋಚಿಸುವುದಿಲ್ಲ; ಅವನು ಏನು ಕೆಲಸ ಮಾಡಬಲ್ಲ ಎನ್ನುವುದನ್ನು ನಾನು ಗಮನಿಸುತ್ತೇನೆ.

–ಚಾರ್ಲ್ಸ್ ಬುಲ್

★ ಆರಂಭ ಮಾಡಿದವನು ಅರ್ಧ ಕೆಲಸ ಮಾಡಿದಂತೆಯೇ. ವಿವೇಕಿ ಆಗು, ಆರಂಭಿಸು.

–ಹೊರೇಸ್

★ ಚಿಕ್ಕದು ಎನ್ನುವ ಕೆಲಸಗಳನ್ನು ಈಗಲೇ ಚೆನ್ನಾಗಿ ಮಾಡು. ಆಗ ದೊಡ್ಡ ಕೆಲಸಗಳು ತಾವಾಗಿಯೇ ನಿನ್ನನ್ನು ಹುಡುಕಿಕೊಂಡು ಬರುತ್ತವೆ.

–ಪರ್ಷಿಯನ್ ಗಾದೆ

★ ಅಂದಂದಿನ ಕೆಲಸವನ್ನು ಅಂದಂದು ಮಾಡಿ, ಅದರ ವಿಷಯವಾಗಿ ಬಹಳವಾಗಿ ಚಿಂತೆ ಮಾಡದೆ ಇರಬೇಕು. ಅದೇ ಒಳ್ಳೆಯ ಜೀವನ.

–ಮಾಸ್ತಿ ವೆಂಕಟೇಶ್ ಅಯ್ಯಂಗಾರ್

★ ದುಡೀಬೇಕು ಮನುಷ್ಯ, ಅತಿ ಆಗಬಾರದು. ಹಣ ಗಳಿಸಬೇಕು, ಬರೀ ಅದೇ? ಬರೀ ಅದೇ ಆಗಬಾರದು. ಎಷ್ಟು ಬೇಕು ಅಷ್ಟ...

–ಸಿದ್ದೇಶ್ವರ ಸ್ವಾಮಿಗಳು

★ ನಮ್ಮ ಕೆಲಸಗಳನ್ನು ನಾವೇ ಮಾಡಿಕೊಳ್ಳುವ ಹವ್ಯಾಸವನ್ನು ಬೆಳೆಸಿಕೊಳ್ಳಬೇಕು. ಮನುಷ್ಯನಿಗೆ ಅವನ ಕೈಗಳಿಗಿಂತ ಅಮೂಲ್ಯವಾದ ಆಸ್ತಿ ಇಲ್ಲ!

–ಮಹಾತ್ಮ ಗಾಂಧೀಜಿ

★ ಕೆಟ್ಟವರು ಹೇಳುವ ಮಾತುಗಳು ನಗುವಿನಿಂದ ಕೂಡಿ ಪ್ರಿಯವಾಗಿದ್ದರೂ, ಕಾಲವಲ್ಲದ ಕಾಲದಲ್ಲಿ ಅರಳಿದ ಹೂಗಳಂತೆ ನನಗೆ ಭಯವನ್ನು ಉಂಟು ಮಾಡುತ್ತವೆ.

–ಹಿತೋಪದೇಶ

★ ನಿಜವಾದ ಗುಣಕ್ಕೆ ತನ್ನದು 'ಗುಣ' ಎನ್ನುವುದೇ ತಿಳಿದಿರುವುದಿಲ್ಲ.

–ಲೋಟ್ಸು

★ ವಯಸ್ಸಾದ ಬಳಿಕ ಗುಣವಂತರಾಗುವುದು, ದೆವ್ವ ಉಳಿಸಿಬಿಟ್ಟಿದ್ದನ್ನು ದೇವರಿಗೆ ಕೊಟ್ಟಂತೆ.

–ಅಲೆಕ್ಸಾಂಡರ್ ಪೋಪ್

★ ನಮ್ಮ ಸ್ವಭಾವ, ನಮ್ಮ ಸಂದರ್ಭ–ಇವೆರಡನ್ನೂ ನಾವು ಕಂಡುಕೊಂಡು ನಮಗೆ ತಕ್ಕ ಗುರಿ ಯಾವುದು, ತಕ್ಕ ದಾರಿ ಯಾವುದು, ಎಂಬುದನ್ನು ನಾವೇ ಗೊತ್ತು ಮಾಡಿಕೊಳ್ಳಬೇಕು.

–ಡಿ.ವಿ.ಗುಂಡಪ್ಪ

★ ಸೋಲುವುದನ್ನು ಕಲಿಸಿ, ಅಂತೆಯೇ ಗೆಲುವಿನ ಸಂತಸವನ್ನು ಕಲಿಸಿ.

–ಅಬ್ರಹಾಂ ಲಿಂಕನ್